ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp.19-24
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

ರಾಯಚೂರು ಜಿಲ್ಲೆಯ ಉಪ್ಪಾರ ಸಮುದಾಯದ ಆರ್ಥಿಕ ಸ್ಥಿತಿಗತಿಗಳು

ರಾಮಕೃಷ್ಣ ಡಿ
ಸಂಶೋಧನಾ ವಿದ್ಯಾರ್ಥಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

Abstract:
ಉಪ್ಪಾರ ಸಮುದಾಯದವರು ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಇವರು ತಮ್ಮ ಬದುಕನ್ನು ಸಾಗಿಸಲು ಅವಲಂಭಿಸಿರುವ ಪ್ರಮುಖ ಕ್ಷೇತ್ರವೆಂದರೆ ಕೃಷಿ, ಕೂಲಿ ಕಾರ್ಮಿಕರಾಗಿ ದುಡಿಯುವುದು. ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಮಣ್ಣಿನಿಂದ ಉಪ್ಪನ್ನು ತಯಾರಿಸಿ ಅದನ್ನು ಮಾರಾಟ ಮಾಡಿ ಜೀವನ ನಡೆಸುತ್ತಿದ್ದರು. ಉಪ್ಪಾರ ಸಮುದಾಯದವರು ರಾಯಚೂರು ಜಿಲ್ಲೆಯ ಏಳು ತಾಲೂಕುಗಳಲ್ಲಿಯೂ ಕಾಣಸಿಗುತ್ತಾರೆ. ಇವರು ನೆಲೆಸಿರುವ ವಿವಿಧ ಹಳ್ಳಿಗಳಲ್ಲಿ ಇಂದಿಗೂ ಕೂಡ ಉಪ್ಪಿನ ಮಾಳಗಳ ದಿಬ್ಬಗಳು ಅಳಿದುಳಿದಿರುವ ಸ್ಥಿತಿಯಲ್ಲಿ ಕಂಡುಬರುತ್ತವೆ. ಇವುಗಳನ್ನು ಅಲ್ಲಿಯ ಸ್ಥಳೀಯರು 'ಮಾಳಗುಡ್ಡೆಗಳು' ಎಂದು ಕರೆಯುತ್ತಾರೆ. ಉಪ್ಪನ್ನು ಮಾರಾಟ ಮಾಡಲು ಗಂಡಹೆಂಡಿರು ಇಬ್ಬರು ಹೋಗುತ್ತಿದ್ದರು. ಗಂಡನು ಇಪ್ಪತ್ತು ಸೇರು ಉಪ್ಪನ್ನು ಹೆಂಡತಿ ಹದಿನೈದು ಸೇರು ಉಪ್ಪನ್ನು ಪುಟ್ಟಿಯಲ್ಲಿ ಹಾಕಿಕೊಂಡು ತಲೆಯ ಮೇಲೆ ಇಟ್ಟುಕೊಂಡು ಆರು ಹರದಾರಿ ಅಂದರೆ ಇಪ್ಪತ್ನಾಲ್ಕು ಕಿ.ಮೀ. ದೂರದವರೆವಿಗೂ ಉಪ್ಪನ್ನು ಮಾರಾಟ ಮಾಡಲು ಹೋಗಿ ಬರುತ್ತಿದ್ದರು. ಈ ಲೇಖನದಲ್ಲಿ ಉಪ್ಪಾರ ಸಮುದಾಯದ ಪ್ರಸ್ತುತ ಆರ್ಥಿಕ ಸ್ಥಿತಿಗತಿಗಳ ಕುರಿತು ಅಧ್ಯಯನ ಮಾಡಲಾಗಿದೆ.

Keywords: *ಉಪ್ಪಾರ ಸಮುದಾಯ, ರಾಯಚೂರು, ಉಪ್ಪು, ಗಣಮೂರು, ಗೋರ್ಕಲ್, ಸಾಲಗುಂದ.*

ಪೀಠಿಕೆ

ಉಪ್ಪಾರ ಸಮುದಾಯವು ಅತ್ಯಂತ ಹಿಂದುಳಿದ ಸಮುದಾಯವಾಗಿದೆ. ಇವರು ಪ್ರಮುಖವಾಗಿ ದಕ್ಷಿಣ ಭಾರತದ ಆಂಧ್ರ ಪ್ರದೇಶ, ತೆಲಂಗಾಣ, ಕರ್ನಾಟಕ, ತಮಿಳುನಾಡುಗಳಲ್ಲಿ ಕಂಡುಬರುತ್ತಾರೆ. ಇವರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕಂಡುಬರುತ್ತಾರೆ. ಆರ್ಥಿಕವಾಗಿ ಹಿಂದುಳಿದಿರುವ ಈ ಸಮುದಾಯವನ್ನು ಕರ್ನಾಟಕದಲ್ಲಿ ಪ್ರವರ್ಗ–1ರಲ್ಲಿ ಸೇರಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ರಾಯಚೂರು ಜಿಲ್ಲೆಯಲ್ಲಿಯೂ ಕೂಡ ಈ ಸಮುದಾಯದವರು ಬಹುತೇಕ ಹಳ್ಳಿಗಳಲ್ಲಿ ನೆಲೆಸಿದ್ದಾರೆ. ಆರ್ಥಿಕವಾಗಿ ದುರ್ಬಲವಾಗಿರುವ ಈ ಸಮುದಾಯ ಇಂದಿಗೂ ಕೂಡ ಕೃಷಿ ಕೂಲಿಯಾಳುಗಳಾಗಿದುಡಿದು ಜೀವನ ಸಾಗಿಸುತ್ತಿದ್ದಾರೆ.

ಈ ಮೊದಲು ಇವರು ಮಣ್ಣಿನಿಂದ ಉಪ್ಪನ್ನು ತಯಾರಿಸಿ ಮಾರಾಟ ಮಾಡಿ ಜೀವನ ನಡೆಸುತ್ತಿದ್ದರು. ಹಾಗಾಗಿ ಇವರನ್ನು ಮಣ್ಣು ಉಪ್ಪಾರರು ಎಂದೂ ಸಹ ಕರೆಯುತ್ತಾರೆ. ಉಪ್ಪು ಮಾರಾಟ ಮಾಡುವುದು ಈ ಸಮುದಾಯದ ಮುಖ್ಯ ಕಸುಬಾಗಿತ್ತು. ಇದರೊಂದಿಗೆ ಕೆಲವರು ಸುಣ್ಣದ ಕಲ್ಲುಗಳನ್ನು ಸುಟ್ಟು ಸುಣ್ಣವನ್ನು ತಯಾರಿಸುತ್ತಿದ್ದರು. ಉಪ್ಪಾರರು ಮನೆಗಳಿಗೆ ಮಣ್ಣಿನ

Please cite this article as: ರಾಮಕೃಷ್ಣ ಡಿ. (2024). ರಾಯಚೂರು ಜಿಲ್ಲೆಯ ಉಪ್ಪಾರ ಸಮುದಾಯದ ಆರ್ಥಿಕ ಸ್ಥಿತಿಗತಿಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(6), 19–24.

ಗೋಡೆಗಳನ್ನು ಕಟ್ಟುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಾರಂಭಿಸಿದರು.

ಗಣಮೂರು ಗ್ರಾಮವು ರಾಯಚೂರು ತಾಲೂಕಿನ ವ್ಯಾಪ್ತಿಯಲ್ಲಿದೆ. ಈ ಊರಿನಲ್ಲಿ ಮೊದಲು ಮೂರು ಮಾಳಗಳಿದ್ದವು. ಈಗ ಅವುಗಳನ್ನು ನೆಲಸಮಗೊಳಿಸಿ ಹೊಲಗಳನ್ನಾಗಿ ಮಾರ್ಪಾಡಿಸಿದ್ದಾರೆ. ಉಳಿದ ಎರಡು ಮಾಳಗಳ ದಿಬ್ಬಗಳು ಉಳಿದಿವೆ. ಶ್ರೀ ಬಮಲ್ಲಪ್ಪ ತಂದೆ ಯಂಕಪ್ಪ, ಸರ್ವೆ ನಂಬರ 112 ಹಿಸ್ಸಾ–1 ಇವರ ಹೊಲದ ಬಳಿ ಒಂದು ಮಾಳವಿದೆ. ಇದು ಸುಮಾರು ಒಂದೂವರೆ ಎಕರೆ ಸುತ್ತಳತೆಯನ್ನು ಹೊಂದಿದೆ. ಇನ್ನೊಂದು ಮಾಳವು ಸುಮಾರು ನಾಲ್ಕು ಎಕರೆ ವಿಸ್ತೀರ್ಣವನ್ನು ಹೊಂದಿದ್ದು ಇದು ಊರಿನ ಕೆರೆಯ ಭಾಗದ ಕಡೆ ಇದೆ. ಈ ಮಾಳೆಗಳಲ್ಲಿ ಉಪ್ಪನ್ನು ಉತ್ಪಾದಿಸುವ ಮತ್ತು ಅದನ್ನು ಮಾರಾಟ ಮಾಡುವ ವೃತ್ತಿ ಜೀವನವನ್ನು ಸುಮಾರು ಅರವತ್ತು ವರ್ಷಕ್ಕೂ ಹಿಂದೆ ಆರು ಗುಂಪುಗಳು ಕೈಗೊಂಡಿದ್ದರು. ಆ ಗುಂಪುಗಳನ್ನು ಮುಖ್ಯಸ್ಥರಿಂದ ಗುರುತಿಸುತ್ತಿದ್ದರು. ಆ ಗುಂಪುಗಳೆಂದರೆ ಜಂಬಯ್ಯ, ಸ್ವಾರಕಾಯಿ ಲಸ್ಮಪ್ಪ, ಸೇವಟಿ ನಾಗಣ್ಣ, ಉಪ್ಪಾರ ನರಸಪ್ಪ, ಉಪ್ಪಾರ ಪೆದ್ದಪಾಗುಂಟಪ್ಪ, ತೀಸ ಪಾಗುಂಟಪ್ಪ ದೊಡ್ಡ ಹನುಮಪ್ಪ, ಸಣ್ಣ ಹನುಮಪ್ಪ, ತಾಯಪ್ಪ, ಗಟ್ಟನ್ನ ಮುಂತಾದವವರು ಸಹ ಈ ಮಾಳಗಳಲ್ಲಿ ಉಪ್ಪನ್ನು ಉತ್ಪಾದನೆ ಮಾಡುತ್ತಿದ್ದರು. ಆದರೆ ಇವರ ಮಕ್ಕಳಾದ ರಂಗಪ್ಪ, ಶ್ರೀನಿವಾಸ, ಪಾಗುಂಟಪ್ಪ, ಹನುಮಂತ ಇನ್ನಿತರರು ಇಂದು ಈ ವೃತ್ತಿಯನ್ನು ಕೈಬಿಟ್ಟು ಇದೇ ಊರಿನಲ್ಲಿರುವ ಭೂಮಾಲೀಕರ ಹೊಲಗಳಲ್ಲಿ ದಿನಗೂಲಿ ಮಾಡುತ್ತಿದ್ದಾರೆ. ಈ ವಿಷಯವನ್ನೆಲ್ಲಾ ವಿವರಿಸಿ ಹೇಳಿದ ಉಪ್ಪಾರ ಜನಾಂಗದ ಹಿರಿಯಾರಾದ ಮುನಿಯಪ್ಪನವರಿಗೆ ಈಗ ಸುಮಾರು ಎಪ್ಪತ್ತು ವರ್ಷಗಳಾಗಿವೆ. ಇವರು ತಮಗೆ ಸುಮಾರು ಹದಿನಾರು ವಯಸ್ಸು ಇರುವಾಗಲೇ ಈ ಮಾಳೆಗಳು ಚಾಲ್ತಿಯಲ್ಲಿದ್ದವೆಂದು ಹೇಳುತ್ತಾರೆ. ಇದೇ ಗ್ರಾಮದ ನರಸಿಂಹಲು ತಂದೆ ದೊಡ್ಡ ರಂಗಣ್ಣ ಈಗ ಅವರ ವಯಸ್ಸು ಅರವತ್ತು ಮೇಲ್ಪಟ್ಟು ಆಗಿದ್ದು ತಾವು ಸುಮಾರು ಹದಿನೈದು ವಯಸ್ಸಿನವರಾಗಿದ್ದಾಗ ಈ ಮಾಳೆಗಳು ಚಾಲ್ತಿಯಲ್ಲಿದ್ದವೆಂದು ಹೇಳುತ್ತಾರೆ. ಎಪ್ಪತ್ತೆರಡು ವಯಸ್ಸಿನ ಗೋವಿಂದಪ್ಪನವರ ಪ್ರಕಾರ ಹೀಗೆ ಸುಮಾರು ಅರವತ್ತು ವರ್ಷಗಳ ಹಿಂದೆ ನಮ್ಮ ತಂದಿರು (ತಂದೆ) ಉಪ್ಪನ್ನು ತಯಾರಿಸುವಾಗ ನಾನು ಹನ್ನೆರಡು ವರ್ಷದ ಹುಡುಗನಾಗಿದ್ದೆನು ಎಂದು ತಿಳಿಸಿದರು.

ಗೋರ್ಕಲ್ ಈ ಗ್ರಾಮವು ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನಲ್ಲಿದೆ. ಈ ಊರಿನಲ್ಲಿ ಸುಮಾರು ನಾಲ್ಕು ಕಡೆಗಳಲ್ಲಿ ಹಿಂದೆ ಉಪ್ಪನ್ನು ತಯಾರು ಮಾಡಲಾದ ಮಾಳೆಗಳ ದಿಬ್ಬಗಳು ಕಂಡುಬರುತ್ತವೆ. ಒಂದು ಮಾಳೆವು ಗೋರ್ಕಲ್ ಗ್ರಾಮದಿಂದ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿದೆ. ಅಂದರೆ ಗೋರ್ಕಲ್‌ನ ಅಡ್ಡರಸ್ತೆಯಿಂದ ರಾಜಲಬಂಡಕ್ಕೆ ಹೋಗುವ ಮುಖ್ಯ ಹಾದಿಯ ಎಡ ಭಾಗದಲ್ಲಿದೆ. ಉಳಿದ ಎರಡು ಮಾಳೆಗಳು ಗೋರ್ಕಲ್ ಅಡ್ಡರಸ್ತೆಯಿಂದ ಊರಿನೆಡೆಗೆ ಹೋಗುವ ಹಾದಿಯಲ್ಲಿ ಬಲಗಡೆ ತಿರುಗಿ ಸುಮಾರು ಅರ್ಧ ಕಿ.ಮೀ. ಅಂತರದಲ್ಲಿ ಎರಡು ಮಾಳೆಗಳು ಸಿಗುತ್ತವೆ. ಇನ್ನೊಂದು ಮಾಳೆ ಊರಿನ ಅಗಸೆ ದ್ವಾರದ ಮುಂದಿನ ಎಡಭಾಗದ ರಸ್ತೆಯಿಂದ ಊರಿನ ಹಿಂದುಗಡೆ ಸುಮಾರು ಮೂರು ಕಿ.ಮೀ. ದೂರದಲ್ಲಿ ಕಂಡುಬರುತ್ತದೆ. ಈ ಊರಿನಲ್ಲಿ ಹಿಂದೆ ಸಮಾರು ಅರವತ್ತು–ಅರವತ್ತೈದು ವರ್ಷಗಳ ಹಿಂದೆ ನಾಲ್ವರು ಅಣ್ಣತಮ್ಮಂದಿರು ಉಪ್ಪು ಮಾಡುವ ಕಾಯಕದಲ್ಲಿ ನಿರತರಾಗಿದ್ದರು. ಅವರುಗಳೆಂದರೆ, ತಿಪ್ಪಣ್ಣ, ತಾಯಪ್ಪ, ಬಸವರಾಜಪ್ಪ ಮತ್ತು ಯಂಕಪ್ಪ. ಅಂದಿನ ಉಪ್ಪನ್ನು ತಯಾರಿಸುವ ಕಾಯಕದಲ್ಲಿ ಉಪ್ಪನ್ನು ತಯಾರಿಸಿ ಅದನ್ನು ಸರಬರಾಜು ಮಾಡುವ ವಿಷಯದಲ್ಲಿ ತುಂಬಾ ಎಚ್ಚರಿಕೆಯನ್ನು ವಹಿಸಬೇಕಾಗಿತ್ತು. ಆದುದರಿಂದ ತಿಪ್ಪಣ್ಣ, ತಾಯಪ್ಪ, ಬಸವರಾಜಪ್ಪ ತಲಾ ಒಂದು ಕೋಣವನ್ನು ಮತ್ತು ಯಂಕಪ್ಪನು ಎರಡು ಕೋಣಗಳನ್ನು ಹೊಂದಿದ್ದರು.

ಪ್ರತಿಯೊಬ್ಬರು ಸುಮಾರು ಐದರಿಂದ ಆರು ಕ್ವಿಂಟಲ್ ಉಪ್ಪನ್ನು ತಯಾರಿಸುತ್ತಿದ್ದರು.

ಸಾಲಗುಂದ ಗ್ರಾಮವು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸಾಲಗುಂದ ಹೋಬಳಿಯ ಒಂದು ಸಣ್ಣ ಗ್ರಾಮವಾಗಿದೆ. ಈ ಗ್ರಾಮವು ಜಿಲ್ಲಾ ಕೇಂದ್ರವಾದ ರಾಯಚೂರು ನಗರದಿಂದ ಸುಮಾರು 110 ಕಿ.ಮೀ. ಮತ್ತು ತಾಲೂಕು ಕೇಂದ್ರವಾದ ಸಿಂಧನೂರು ಪಟ್ಟಣದಿಂದ ಸುಮಾರು 19 ಕಿ.ಮೀ. ದೂರದಲ್ಲಿದೆ. ಈ ಊರಿನಲ್ಲಿ ಎರಡು ದೊಡ್ಡ ಉಪ್ಪಿನ ಮಾಳೆಗಳ ದಿಬ್ಬಗಳು ಕಂಡುಬರುತ್ತವೆ. ಒಂದು ಮಾಳೆಯು ಸುಮಾರು 4 ಎಕರೆ ವಿಸ್ತೀರ್ಣ ಸ್ಥಳದಲ್ಲಿ ಕಂಡುಬರುತ್ತದೆ. ಇನ್ನೊಂದು ಮಾಳೆಯು ಸುಮಾರು 3 ಎಕರೆ ವಿಸ್ತೀರ್ಣ ಸ್ಥಳದಲ್ಲಿದೆ. ಈಗ ಮಾಳೆಗಳು ಅಳಿದು ಹೋಗಿ ಮಾಳೆಯ ದಿಬ್ಬಗಳು ಮಾತ್ರ ಕಂಡುಬರುತ್ತವೆ. ಈ ದಿಬ್ಬಗಳು ಸುಮಾರು 30 ಅಡಿ ಎತ್ತರವಾಗಿರುತ್ತವೆ. ಶ್ರೀ ತಿಪ್ಪಣ್ಣ ತಂದೆ ಛತ್ರಪ್ಪ ವಯಸ್ಸು ಸುಮಾರು 72. ಇವರು ಹೇಳುವ ಪ್ರಕಾರ ಇವರು ತಮ್ಮ ತಂದೆಯವರಾದ ಛತ್ರಪ್ಪನವರೊಂದಿಗೆ ಸುಮಾರು 18 ವಯಸ್ಸಿನವರಾದ ಇವರು ಅವರ ಜೊತೆಯಲ್ಲಿ ಸೇರಿಕೊಂಡು ಉಪ್ಪನ್ನು ಉತ್ಪಾದನೆ ಮಾಡುತ್ತಿದ್ದರು. ಹೀಗೆ ಈ ಕಾಯಕವನ್ನು ಸುಮಾರು ತಮ್ಮ 25ನೇ ವಯಸ್ಸಿನವರೆಗೆ ಮುಂದುವರೆಸಿದ್ದಾರೆ. ಈ ಊರಿನ ಮಾಳೆಗಳು ಈ ಊರಿನಿಂದ ನದಿಗೆ ಹೋಗುವ ಹಾದಿಯಲ್ಲಿ ಎಡಭಾಗದಲ್ಲಿವೆ. ಇವು ಊರಿನಿಂದ ಸುಮಾರು 2.5 ಕಿ.ಮೀ. ದೂರದಲ್ಲಿವೆ. ಮಾಳೆಗಳಿಂದ ಸುಮಾರು 1 ಕಿ.ಮೀ.ದೂರದಲ್ಲಿ ಉಪ್ಪುಮಣ್ಣು ದೊರೆಯುವ ಸ್ಥಳವಿದೆ. ಈ ಉಪ್ಪುಮಣ್ಣು ದೊರೆಯುವ ಸ್ಥಳವು ಸಾಲಗುಂದ, ಸೋಮ್ಲಾಪುರ ನಡುವಿನ ಅಡವಿ ಪ್ರದೇಶವಾಗಿದ್ದು ಇದನ್ನು ಡೇಗಲ್ ಪ್ರದೇಶ ಎಂದು ಸ್ಥಳೀಯರು ಕರೆಯುತ್ತಾರೆ. ಅಂದು ಆ ಮಾಳೆಗಳಲ್ಲಿ ಉಪ್ಪು ತಯಾರಿಸುತ್ತಿದ್ದ ಪ್ರಮುಖ ವ್ಯಕ್ತಿಗಳೆಂದರೆ, ಒಣಕೆ ರಂಗಮ್ಮ, ಛತ್ರಪ್ಪನವರು, ತಲೆಖಾನ್ ರಂಗಪ್ಪ, ತಲೆಖಾನ್ ಲಕ್ಷ್ಮಪ್ಪ, ತಲೆಖಾನ್ ಬಸಪ್ಪ ಮುಂತಾದವರು. ಪ್ರತಿ ಕುಟುಂಬದವರು ಒಂದೊಂದು ಕೋಣವನ್ನು ಸಾಕಿದ್ದರು. ಏಕೆಂದರೆ ಇವರಿಗೆ ಉಪ್ಪಿನ ಮಣ್ಣು ಬೇಕಾದಾಗ ಉಪ್ಪಿನಮಣ್ಣು ಸಿಗುವ ಸ್ಥಳಕ್ಕೆ ಹೋಗಿ ಅಲ್ಲಿಂದ ಒಂದು ಕೋಣದ ಮೇಲೆ ಎರಡು ಚೀಲಗಳಂತೆ ಮಣ್ಣನ್ನು ಸಾಗಿಸಿ ತಂದು ಮಾಳೆಯಲ್ಲಿ ಸಂಗ್ರಹಿಸುತ್ತಿದ್ದರು. ಆ ಒಂದೊಂದು ಚೀಲವು 40 ರಿಂದ 50 ಕೆಜಿ ಉಪ್ಪಿನ ಮಣ್ಣನ್ನು ತುಂಬಿಸಲಾಗುತ್ತಿತ್ತು. ಹೀಗೆ ಒಂದು ದಿನದಲ್ಲಿ ಒಂದು ಕೋಣದಿಂದ ಎರಡು ಬಾರಿ ಉಪ್ಪು ಮಣ್ಣನ್ನು ಮಾಳಿಗಳಿಗೆ ತಂದು ಸಂಗ್ರಹಿಸುತ್ತಿದ್ದರು.

ತಿಪ್ಪಣ್ಣನವರು ತಮ್ಮ ತಂದೆಯವರು ಉಪ್ಪನ್ನು ತಯಾರಿಸುತ್ತಿದ್ದ ವಿಧಾನವನ್ನು ಎಳೆ ಎಳೆಯಾಗಿ ಬಿಡಿಸಿ ವಿವರಿಸಿದರು. ಮೊದಲನೆಯದಾಗಿ ಮಾಳೆದಲ್ಲಿ ಅಮರೆ ತಪ್ಪಲನ್ನು ಹಾಕಿ ಅದನ್ನು ಮಾಳೆಯ ಮೋರಿಗೆ ಇಟ್ಟಿರುತ್ತಾರೆ. ಏಕೆಂದರೆ ಮಾಳೆಯಲ್ಲಿನ ಉಪ್ಪಿನ ಸಾರ ನಿಧಾನವಾಗಿ ಬಸಿಯಲೆಂದು ಅಡ್ಡವಾಗಿ ಇಟ್ಟಿರುತ್ತಾರೆ. ನಂತರ ಅದರ ಮೇಲೆ ಸ್ವಲ್ಪ ಪ್ರಮಾಣದಲ್ಲಿ ಸವಳು ಮಣ್ಣನ್ನು ಹಾಕುತ್ತಾರೆ, ನಂತರ ಅದರ ಮೇಲೆ ಕೆಲವಷ್ಟು ಬಿಂಚೆಕಲ್ಲುಗಳನ್ನು ಹಾಕುತ್ತಾರೆ. ನಂತರ ಅದರ ಮೇಲೆ ಉಪ್ಪಿನ ಮಣ್ಣನ್ನು ಸುರಿಯುತ್ತಾರೆ. ಅದರ ಮೇಲೆ ಮೂರು ಇಂಚುಗಳಷ್ಟು ಎತ್ತರ ನೀರು ನಿಲ್ಲುವವರೆಗೆ ನೀರು ಹಾಕಿ ಅದನ್ನು ಸುಮಾರು 24 ಗಂಟೆಗಳ ಕಾಲ ಹಾಗೆಯೇ ಬಿಟ್ಟುಬಿಡುತ್ತಾರೆ. ಒಳಗಿನ ಆ ಮಣ್ಣು ಪೂರ್ತಿಯಾಗಿ ನೆನೆದು ನಂತರ ಆ ಮೋರಿಯಿಂದ ನಿಧಾನವಾಗಿ ನೀರು(ಚಾರ) ಬಸಿಯಲು ಆರಂಭವಾಗುತ್ತದೆ. ಆ ಬಸಿಯುವಂತ ಸಾರವು ಒಂದು ಕಡೆ ಸಂಗ್ರಹವಾಗುವಂತೆ ಮೋರಿಯ ಕೆಳಗೆ ಒಂದು ಕೇಲನ್ನು ನಿರ್ಮಾಣ ಮಾಡಿಟ್ಟಿರುತ್ತಿದ್ದರು. ನಂತರ ಸಂಗ್ರಹವಾದ ಆ ಚಾರವನ್ನು ಕೊಡ(ಬಿಂದಿಗೆ)ಗಳಲ್ಲಿ ತೆಗೆದುಕೊಂಡು ಕಟ್ಟೆಗಳ ಮೇಲೆ ಆ ಚಾರವನ್ನು ಹಾಕುತ್ತಿದ್ದರು. ಸಾಲಗುಂದದಲ್ಲಿ ಒಟ್ಟು ಎರಡು ಮಾಳೆಯ

ದಿಬ್ಬಗಳಿವೆ. ಒಂದು ದೊಡ್ಡ ಮಾಳೆಯ ದಿಬ್ಬದ ಮಧ್ಯದಲ್ಲಿ 3 ಕಟ್ಟೆಗಳಿವೆ. ಒಂದೊಂದು ಕಟ್ಟೆಗಳ ಉದ್ದ 6 ಮತ್ತು ಅಗಲ 6 ಅಡಿಗಳ ವಿಸ್ತೀರ್ಣವನ್ನು ಹೊಂದಿವೆ. ಒಂದು ಬಾರಿ ಕಟ್ಟೆಗಳ ಮೇಲಿನ ಉಪ್ಪನ್ನು ಬಸಿದುಕೊಂಡರೆ ಒಂದು ಕಟ್ಟೆಗೆ ಒಂದು ಚೀಲದಂತೆ ಮೂರು ಕಟ್ಟೆಗಳಿಂದ ಒಮ್ಮೆ ಸಂಗ್ರಹಿಸಿದ ಉಪ್ಪು ಸುಮಾರು 50 ಕೆ.ಜಿ. ಗಳಷ್ಟು ದೊರಕುತ್ತಿತ್ತು.

ಮೇಲೆ ವಿವರಿಸಲಾದಂತೆ ಉತ್ಪಾದಿಸಲಾದ ಉಪ್ಪನ್ನು ಮಣ್ಣುಪ್ಪು ಎಂದು ಕರೆಯುತ್ತಾರೆ. ಈ ಉಪ್ಪನ್ನು ಕೆಲವು ಗಿಡಮೂಲಿಕೆ ಔಷಧಗಳಲ್ಲಿ ಉಪಯೋಗಿಸುತ್ತಾರೆ. ಕಟ್ಟೆಗಳ ಮೇಲೆ ಹಾಕಲಾದ ಆ ಉಪ್ಪಿನ ಚಾರವು ವಾತಾವರಣವನ್ನು ಅವಲಂಬಿಸಿ ಮೂರು ದಿನಗಳಲ್ಲಿ ಹೆಪ್ಪುಗಟ್ಟಿ ಉಪ್ಪಿನ ಹರುಳುಗಳಾಗಿ ಮಾರ್ಪಡುತ್ತದೆ. ಇಂತಹ ಉಪ್ಪನ್ನು ಇವರು 1 ರೂಪಾಯಿಗೆ 16 ಸೇರುಗಳಂತೆ ಮಾರಾಟ ಮಾಡುತ್ತಿದ್ದರು. ಇವರು ಉಪ್ಪನ್ನು ಮಾರಾಟ ಮಾಡಲು ತಮ್ಮ ಗ್ರಾಮದ ಸುತ್ತಮುತ್ತಲಿನ ಹಳ್ಳಿಗಳಾದ ಕೆಂಗೆಲ್, ಅಲಬನೂರು, ಹರಟೆನೂರು, ಗಿಣಿವಾರ, ಬಾದರ್ಲಿ, ಕನ್ನಾರಿ, ಮಾಡಶಿರವಾರ ಇತ್ಯಾದಿ ಕಡೆಗಳಿಗೆ ಹೋಗುತ್ತಿದ್ದರು. ಅಗಸರು ಇವರ ಬಟ್ಟೆಗಳನ್ನು ತೊಳೆಯುತ್ತಿದ್ದರು ಮತ್ತು ಅದಕ್ಕೆ ಪ್ರತಿಯಾಗಿ ವರ್ಷಕ್ಕೆ ಒಂದು ಚೀಲ ಉಪ್ಪನ್ನು ಕೊಡುತ್ತಿದ್ದರು. ಇವರಿಗೆ 2 ಸೇರು ಮುಂಗಾರು ಜೋಳ ಕೊಟ್ಟರೆ, ಇವರು ಅವರಿಗೆ 16 ಸೇರು ಉಪ್ಪನ್ನು ಕೊಡುತ್ತಿದ್ದರು. 1 ಸೇರು ಮುಂಗಾರು ಜೋಳ ಕೊಟ್ಟರೆ, ಇವರು ಅವರಿಗೆ 8 ಸೇರು ಉಪ್ಪನ್ನು ಕೊಡುತ್ತಿದ್ದರು.

ಸಿದ್ದಪ್ಪನವರು ತಮ್ಮ 25ರ ವಯಸ್ಸಿನ ನಂತರ ಒಕ್ಕಲುತನದಲ್ಲಿ ರಾಸಾಯನಿಕ ಗೊಬ್ಬರ ಮತ್ತು ನೀರಾವರಿಯ ಸೌಲಭ್ಯಗಳಿಂದಾಗಿ ಉಪ್ಪು ಉತ್ಪಾದಿಸುವ ತಮ್ಮ ಕುಲಕಸಬನ್ನು ಬಿಟ್ಟು ಪೂರ್ಣವಾಗಿ ತಮ್ಮನ್ನು ಒಕ್ಕಲುತನದಲ್ಲೆ ತೊಡಗಿಸಿಕೊಂಡರು. ಇದಕ್ಕೆ ಕಾರಣವೇನೆಂದರೆ ಸರ್ಜಾಪುರ ಗ್ರಾಮವು ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ವ್ಯಾಪ್ತಿಯಲ್ಲಿದೆ. ಈ ಊರಿನಲ್ಲಿ ಒಟ್ಟು ಸುಮಾರು ಎಂಟು ಮಾಳೆಗಳಿವೆ. ಊರಿನಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿ ಎರಡು ಮಾಳೆಗಳಿವೆ. ಸರ್ಜಾಪುರ ಗ್ರಾಮದಿಂದ ಗುಡದನಾಳ ಗ್ರಾಮಕ್ಕೆ ಹೋಗುವ ದಾರಿಯ ಎಡಭಾಗದಲ್ಲಿ ಎರಡು ಮಾಳೆಗಳಿವೆ. ಸರ್ಜಾಪುರ ಗ್ರಾಮದಿಂದ ಸಂತೆಕಲ್ಲೂರಿಗೆ ಹೋಗುವ ಕಾಲುದಾರಿಯ ಬಲಭಾಗದಲ್ಲಿ ಎರಡು ಮಾಳೆಗಳಿವೆ. ಇವು ಊರಿನಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿವೆ. ಊರು ಮುಂದಿನ ಹಳ್ಳದ ದಂಡೆಯಲ್ಲಿ ಒಂದು ಮಾಳೆಯಿದೆ. ಇಲ್ಲಿನ ಉಪ್ಪಾರರು ಉಪ್ಪನ್ನು ಉತ್ಪಾದಿಸಲು ಉಪ್ಪಿನ ಮಣ್ಣನ್ನು ಮಾಳೆಗಳಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿರುವ ಹಿರೆಹಳ್ಳ ಎಂಬ ಹಳ್ಳದ ದಡಗಳ ಭಾಗದಿಂದ ಸಂಗ್ರಹಿಸುತ್ತಿದ್ದರು. ಈ ಮಣ್ಣನ್ನು ಇಲ್ಲಿಂದ ಮಾಳೆಗಳವರೆಗೆ ಹೊಯ್ಯಲು ಅಥವಾ ತೆಗೆದುಕೊಂಡು ಹೋಗಲು ಇವರು ಕೋಣಗಳನ್ನು ಸಾಕಿದ್ದರು. ಪ್ರತಿ ಕೋಣದ ಮೇಲೆ ಎರಡು ಗೋಣಿ ಚೀಲಗಳ ತುಂಬ ಮಣ್ಣನ್ನು ಹೊಯ್ಯುತ್ತಿದ್ದರು. ಇವರು ಒಂದು ಮಾಳೆದಲ್ಲಿ ಹತ್ತು ಬುಟ್ಟಿ ಪುಟ್ಟಿಗಳ ಮಣ್ಣು ಹಾಕಿದರೆ ಸುಮಾರು ಆರು ಕೊಡ ನೀರು ಬೆರೆಸುತ್ತಿದ್ದರು. ಉಪ್ಪು ಮಣ್ಣು ಮತ್ತು ನೀರು ನೆನೆದು ಆ ಮಾಳೆಯ ಮೋರಿಯ ಮೂಲಕ ನಿಧಾನವಾಗಿ ಚಾರವಾಗಿ ಮೋರಿಯ ಕೆಳಗಿದ್ದ ಕೇಲಿನಲ್ಲಿ ಸೋರುತ್ತಿತ್ತು. ಅದು ಸುಮಾರು ಮೂವತ್ತು ಲೀಟರ್‌ನ ನಾಲ್ಕು ಕೊಡದಷ್ಟು ಆಗುತ್ತಿತ್ತು. ಆ ನಾಲ್ಕು ಕೊಡದಷ್ಟು ಚಾರವನ್ನು ಮಾಳೆ ಕಟ್ಟೆಗಳ ಮೇಲೆ ಸುರಿಯುತ್ತಿದ್ದರು. ಅದು ಸುಮಾರು ಒಂದು ವಾರದಲ್ಲಿ ಉಪ್ಪಾಗಿ ಸಿದ್ಧವಾಗುತ್ತಿತ್ತು. ಸಿದ್ಧವಾದ ಉಪ್ಪನ್ನು ಅಗೆವುಗಳಿಗೆ ಹಾಕಿ ಉಪ್ಪನ್ನು ಸಂಗ್ರಹ ಮಾಡುತ್ತಿದ್ದರು. ಈ ಉಪ್ಪನ್ನು ಉತ್ಪಾದನೆ ಮಾಡುವ ಕಾರ್ಯವು ಸಾಮಾನ್ಯವಾಗಿ ಎಳ್ಳ ಅಮವಾಸ್ಯೆಯಿಂದ ಮೊದಲ್ಗೊಂಡು ಸುಮಾರು ಎಂಟು ತಿಂಗಳಗಳ ಕಾಲ ಈ ಉಪ್ಪನ್ನು ಉತ್ಪಾದಿಸುವ ಕಾರ್ಯಕ್ರಮವು

ನಡೆಯುತ್ತದೆ. ನಂತರದ ಕಾಲವನ್ನು ಮನೆಕೆಲಸ, ಒಕ್ಕಲುತನ, ಕೂಲಿ ಮೊದಲಾದ ಕಾರ್ಯಗಳಲ್ಲಿ ನಿರತರಾಗುತ್ತಾರೆ. ನಂತರ ಉಪ್ಪನ್ನು ತೆಗೆದುಕೊಂಡು ಮಾರಾಟಕ್ಕೆ ಹೋಗುತ್ತಿದ್ದರು. ಅಂದು ಆ ಊರಿನಲ್ಲಿ ಉಪ್ಪನ್ನು ಉತ್ಪಾದಿಸಿ ಮಾರಾಟ ಮಾಡುತ್ತಿದ್ದ ವ್ಯಕ್ತಿಗಳೆಂದರೆ, ಗುಂಟಿ ಜಯಪ್ಪ, ಗುಂಟಿ ಸಾಬಣ್ಣ, ರತ್ತಾಳ ಯೋಗಪ್ಪ, ಮಣ್ಣಗುಳಿ ಸಂಗಪ್ಪ, ಮಣ್ಣಗುಳಿ ಅಮರಪ್ಪ, ಪೂಜಾರಿ ಕನಕಪ್ಪ, ಬುಡ್ಡ ಅಮರಪ್ಪ (ಯಾದಗಿರಿ), ಸಂಜೀವಪ್ಪ (ಯಾದಗಿರಿ), ಮಣ್ಣಗುಳಿ ಹನುಮಂತ, ಮಣ್ಣಗುಳಿ ವಿರುಪಣ್ಣ, ಮಾಲಗಿತ್ತಿ ತಿಪ್ಪಣ್ಣ, ಯಾದಗಿರಿ ಸಾಬಣ್ಣ, ವಡವಟ್ಟಿ ಅಮರಪ್ಪ, ತೊರ್ಲಬೆಂಚಿ ದೇವೇಂದ್ರಪ್ಪ, ತೊರ್ಲಬೆಂಚಿ ಆದಪ್ಪ, ವಡವಟ್ಟಿ ಬಾಲಪ್ಪ, ಗೋಡಿಹಾಳ ದೇವೇಂದ್ರಪ್ಪ, ತಳ್ಳಿ ಅಮರಪ್ಪ, ಯಮುನಮ್ಮ, ಗೋಗಿ ಯಮುನಮ್ಮ ಇನ್ನೂ ಅನೇಕರು. ಅವರು ತಮ್ಮ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಿ ಉಪ್ಪನ್ನು ಮಾರಾಟ ಮಾಡಿಕೊಂಡು ಬರುತ್ತಿದ್ದರು. ಉದಾಹರಣೆಗಾಗಿ ನಾಗರಹಾಳ, ಕೊಡಿಹಾಳ, ತೊಂಡಿಹಾಳ, ಕರಡಿ, ಗಜ್ಜಲಗಟ್ಟ, ನೀಲೋಗಲ್, ನಾಗನೂರು, ಅನ್ವರಿ, ಪಾಮನ ಕಲ್ಲೂರು, ಸಂತೆಕಲ್ಲೂರು, ಹಳ್ಳಿ, ಮಟ್ಟೂರು, ಉಡ್ಯಾಳ ಮೊದಲಾದವು.

ಸ್ವಂತ ಎತ್ತುಗಳು ಮತ್ತು ಬಂಡಿ ಇದ್ದವರು ಎತ್ತಿನ ಬಂಡಿಯ ಮೇಲೆ ಉಪ್ಪನ್ನು ಮಾರಾಟ ಮಾಡಲು ಹೊಯ್ಯುತ್ತಿದ್ದರು. ಇಲ್ಲದವದವರು ಉಪ್ಪನ್ನು ಪುಟ್ಟಿಯಲ್ಲಿ ಹಾಕಿಕೊಂಡು ಅದನ್ನು ತಲೆಯ ಮೇಲೆ ಇರಿಸಿಕೊಂಡು ಉಪ್ಪನ್ನು ಮಾರಾಟ ಮಾಡಲು ಗಂಡಹೆಂಡಿರು ಇಬ್ಬರೂ ಹೋಗುತ್ತಿದ್ದರು. ಗಂಡನು ಇಪ್ಪತ್ತು ಸೇರು ಉಪ್ಪನ್ನು ಹೆಂಡತಿ ಹದಿನೈದು ಸೇರು ಉಪ್ಪನ್ನು ಪುಟ್ಟಿಯಲ್ಲಿ ಹಾಕಿಕೊಂಡು ತಲೆಯ ಮೇಲೆ ಇಟ್ಟುಕೊಂಡು ಆರು ಹರದಾರಿ ಅಂದರೆ ಇಪ್ಪತ್ನಾಲ್ಕು ಕಿ.ಮೀ. ದೂರದವರೆವಿಗೂ ಉಪ್ಪನ್ನು ಮಾರಾಟ ಮಾಡಲು ಹೋಗಿ ಬರುತ್ತಿದ್ದರು. ಇವರು ಒಂದು ಸೇರು ಜೋಳಕ್ಕೆ ಎರಡು ಸೇರು ಉಪ್ಪನ್ನು ಹಾಕುತ್ತಿದ್ದರು. ಒಂದು ಸೇರು ಹೆಸರು ಕಾಳುಗಳಿಗೆ ಮೂರು ಸೇರು ಉಪ್ಪನ್ನು ಹಾಕುತ್ತಿದ್ದರು. ನಂತರದ ದಿನಗಳಲ್ಲಿ ಈ ವೃತ್ತಿಯನ್ನು ಅವರ ವಂಶಸ್ಥರು ವಂಶಪಾರಂಪರ್ಯವಾಗಿ ಮುಂದುವರೆಸಿಕೊಂಡು ಹೋಗಲಾಗಲಿಲ್ಲ. ಅವರ ಮಕ್ಕಳು ಮತ್ತು ಮೊಮ್ಮಕ್ಕಳ ಪ್ರಸ್ತುತ ಸ್ಥಿತಿಗತಿಗಳು ಈ ಮುಂದಿನಂತೆ ಕಂಡುಬಂದಿವೆ. ಗುಂಟಿ ಜಯಪ್ಪನವರಿಗೆ ಬಸ್ಸಪ್ಪ ಮತ್ತು ಶಣ್ಮೂಖಪ್ಪ ಎಂಬ ಇಬ್ಬರು ಮಕ್ಕಳಿದ್ದು ಬಸ್ಸಪ್ಪನು ಒಕ್ಕಲುತನ ಮತ್ತು ಕೂಲಿ ಮಾಡುತ್ತಾನೆ. ಬಸ್ಸಪ್ಪನಿಗೆ ಹನುಮಂತ ಮತ್ತು ರಮೇಶ ಎಂಬ ಇಬ್ಬರು ಮಕ್ಕಳಿದ್ದು, ಇವರಿಬ್ಬರು ಡ್ರೈವರ್ ವೃತ್ತಿಯನ್ನು ಮಾಡುತ್ತಿದ್ದಾರೆ. ಶಣ್ಮೂಖಪ್ಪನು ಮೃತಪಟ್ಟಿದ್ದು ಈತನಿಗೆ ಹನುಮಂತ, ದೇವಪ್ಪ, ನಾಗಪ್ಪ ಎಂಬ ಮಕ್ಕಳಿದ್ದು ಹನುಮಂತನು ಹಟ್ಟಿ ಚಿನ್ನದ ಗಣಿಯಲ್ಲಿ ಕೆಲಸ ಮಾಡುತ್ತಿದ್ದಾನೆ ಮತ್ತು ದೇವಪ್ಪ, ನಾಗಪ್ಪನವರು ಗಾರೆ ಕೆಲಸವನ್ನು ಮಾಡುತ್ತಿದ್ದಾರೆ. ಗುಂಟಿ ಸಾಬಣ್ಣವವರಿಗೆ ಗಂಡು ಸಂತಾನವಿಲ್ಲ. ರತ್ತಾಳ ಯೋಗಪ್ಪನವರಿಗೆ ಷಣ್ಮೂಖಪ್ಪ ಎಂಬ ಮಗನಿದ್ದು ಆತನು ಸರ್ಕಾರಿ ತೆರಿಗೆ ಇಲಾಖೆಯ ಅಧಿಕಾರಿಯಾಗಿದ್ದು ಈಗ ನಿವೃತ್ತಿ ಹೊಂದಿದ್ದಾರೆ. ಷಣ್ಮೂಖಪ್ಪನಿಗೆ ವೆಂಕಟೇಶ ಎಂಬ ಮಗನಿದ್ದು ಆತನು ಖಾಸಗಿಯಾಗಿ ಇಂಜಿನೀಯರಿಂಗ್ ಉದ್ಯೋಗ ಮಾಡುತ್ತಿದ್ದಾನೆ. ಮಣಗುಳಿ ಸಂಗಪ್ಪನವರ ಮಗನು ಒಕ್ಕಲುತನ ಮಾಡುತ್ತಿದ್ದಾನೆ. ಈತನಿಗೆ ಗಂಗಪ್ಪ, ಸಂಗಪ್ಪ, ಮುದಿಯಣ್ಣ ಎಂಬ ಮಕ್ಕಳಿದ್ದು ಗಂಗಪ್ಪ ಮತ್ತು ಸಂಗಪ್ಪ ಇಬ್ಬರೂ ಕೆಎಸ್ಆರ್‌ಟಿಸಿ ಯಲ್ಲಿ ಚಾಲಕರಾಗಿದ್ದಾರೆ. ಮುದಿಯಣ್ಣನು ಒಕ್ಕಲುತನ ಮಾಡುತ್ತಿದ್ದಾನೆ. ಮಣಗುಳಿ ಅಮರಪ್ಪನವರ ಮಗ ಅಳ್ಳಪ್ಪನು ಹಟ್ಟಿ ಚಿನ್ನದ ಗಣಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಅಳ್ಳಪ್ಪನ ಇಬ್ಬರು ಗಂಡು ಮಕ್ಕಳು ಹಟ್ಟಿ ಚಿನ್ನದ ಗಣಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಪೂಜಾರಿ ಕನಕಪ್ಪನ ಮಕ್ಕಳಾದ ಸಿದ್ದಪ್ಪ, ಭೀಮಣ್ಣ, ಗಂಗ್ರಪ್ಪನವರು ಒಕ್ಕಲುತನ ಮತ್ತು ಕೂಲಿ ಕೆಲಸ ಮಾಡುತ್ತಿದ್ದಾರೆ. ಸಿದ್ದಪ್ಪನ ಮೂರು ಗಂಡು ಮಕ್ಕಳು

ಗವಂಡಿ ಕೆಲಸ ಮಾಡುತ್ತಾರೆ. ಭೀಮಣ್ಣನ ಮಕ್ಕಳಾದ ಶರಣಪ್ಪ, ರಾಮಲಿಂಗಪ್ಪ ಬೆಂಗಳೂರಿನಲ್ಲಿ ದಿನಕೂಲಿ ಕೆಲಸ ಮಾಡುತ್ತ ಜೀವನ ಸಾಗಿಸುತ್ತಿದ್ದಾರೆ. ಬುಡ್ಡ ಅಮರಪ್ಪನಿಗೆ ನಾಗಪ್ಪ, ವಿಠೋಬ, ಸಾಬಣ್ಣ ಎಂಬ ಮಕ್ಕಳಿದ್ದು ಇವರು ತಮ್ಮ ಜೀವನ ನಿರ್ವಹಣೆಗಾಗಿ ಒಕ್ಕಲುತನ ಮತ್ತು ಕೂಲಿಯನ್ನು ಅವಲಂಬಿಸಿದ್ದಾರೆ.

ಒಟ್ಟಾರೆಯಾಗಿ ಉಪ್ಪಾರ ಸಮುದಾಯದವರು ತಮ್ಮ ಮೂಲ ವೃತ್ತಿಯಿಂದ ವಿಮುಖರಾಗಿ ಇತರೆ ವೃತ್ತಿಗಳತ್ತ ಮುಖ ಮಾಡಿದ್ದಾರೆ. ಜಮೀನು ಇರುವವರು ವ್ಯವಸಾಯದ ಜೊತೆಗೆ ಕೂಲಿಯನ್ನು ಅವಲಂಬಿಸಿಕೊಂಡಿದ್ದರೆ, ಭೂರಹಿತರು ಕೃಷಿಕೂಲಿಯ ಜೊತೆಗೆ ಕಟ್ಟಡ ಕಾರ್ಮಿಕರಾಗಿ ದುಡಿದು ಕುಟುಂಬ ನಿರ್ವಹಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣಿ ಅರಿವು ಮೂಡಿದ್ದು, ವಿದ್ಯಾವಂತರ ಸಂಖ್ಯೆ ತಡವಾಗಿ ಹೆಚ್ಚುತ್ತಿದೆ. ಆದರೆ ಇತರೆ ಹಿಂದುಳಿದ ಸಮುದಾಯಗಳಿಗೆ ಹೋಲಿಸಿದಾಗ ಇವರಲ್ಲಿ ಅನಕ್ಷರತೆ ಪ್ರಮಾಣ ಅಧಿಕವಾಗಿದೆ. ಬಾಲ್ಯ ವಿವಾಹ, ಅನಕ್ಷರತೆ, ಬಡತನ, ನಿರುದ್ಯೋಗ ಇಂದಿಗೂ ಇವರನ್ನು ಬೆಂಬಿಡದೆ ಕಾಡುತ್ತಿದೆ.

ಪರಾಮರ್ಶನ ಗ್ರಂಥಗಳು

- ಎಡ್ಗರ್ ಥರ್ಸ್ಟನ್ ಮತ್ತು ಕೆ. ರಂಗಾಚಾರಿ. (1909). ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ–ಸಂಪುಟ7. ಗೌವರ್ನಮೆಂಟ್ ಪ್ರೆಸ್.
- ಹೀರೆಮಠ. ಎಸ್.ಎಸ್. (1997). ಉಪ್ಪಾರರು. ಹರಪನಹಳ್ಳಿ ತಾಲೂಕು ನೌಕರರ ಸಂಘ.
- ಕಿಟೆಲ್.ಆರ್.ಎಫ್. (1894). ಕನ್ನಡ–ಇಂಗ್ಲೀಷ್ ನಿಘಂಟು. ಬ್ಯಾಸೆಲ್ ಮಿಷನ್ ಬುಕ್ಸ್ ಮತ್ತು ಟ್ರ್ಯಾಕ್ಟ್ ಡೆಪಾಸಿಟರಿ.
- ಲೇಪಾಕ್ಷ ಸ್ವಾಮಿಗಳು. (1999). ಉಪ್ಪಾರ ಚರಿತಾಮೃತ. ಭಗೀರಥ ಸಂಕಲ್ಪ ಟ್ರಸ್ಟ್.
- ವೆಂಕಟ ರಂಗೋಕಟ್ಟಿ. (1893). ಗ್ಯಾಝೆಟಿಯರ್ ಆಫ್ ದ ಬಾಂಬೆ ಪ್ರೆಸಿಡೆನ್ಸಿ. ಗೌವರ್ನಮೆಂಟ್ ಸೆಂಟ್ರಲ್ ಪ್ರೆಸ್.